# ಟೀಕೆಯ ಬಾಣಗಳಿಗೂ ಇರಲಿ ಸೌಂದರ್ಯ ಸ್ಪರ್ಶ

**ಮತ್ತೊಬ್ಬರ ಬಗೆಗಿನ ಋಣಾತ್ಮಕ ಮಾತುಗಳು ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರಬಲ್ಲವು. ನಮ್ಮ ಟೀಕೆ ಟಿಪ್ಪಣಿಗಳು ಆರೋಗ್ಯಕರವಾಗಿದ್ದಾಗ ಮಾತ್ರ, ಮಕ್ಕಳು ಅವುಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಲು ಸಾಧ್ಯ.**

■ ಸ್ವಯಂಪ್ರಭಾ

ನೃತ್ಯ ಕಾರ್ಯಕ್ರಮಕ್ಕೆ ಹೋಗಿದ್ದ ನೀಲಿಮಾ ಇಡೀ ಕಾರ್ಯಕ್ರಮದಲ್ಲಿ ಒಳ್ಳೆಯ ಲಹರಿಯಲ್ಲಿದ್ದಳು. ಆದರೆ, ಕಾರ್ಯಕ್ರಮ ಮುಗಿದು ಕಾರು ಏರುವಾಗ ಮಾತ್ರ ಅವಳ ಮಾತುಗಳಲ್ಲಿ ಸಿಡಿಮಿಡಿ ಕಾಣಿಸಿಕೊಂಡಿತ್ತು. 'ಪುಟ್ಟಿ, ಬೇಗ ಕಾರು ಹತ್ತು. ಅಲ್ಲ, ಆ ಹುಡುಗಿ ಗುಲಾಬಿ ಕಚ್ಚೆಗೆ ಕಪ್ಪು ರವಿಕೆ ತೊಟ್ಟಿದ್ದಾಳಲ್ಲ; ಸ್ವಲ್ಪವೂ ಟ್ರೆಡಿಷನಲ್ ಸೆನ್ಸ್ ಇಲ್ಲ. ಭರತನಾಟ್ಯ ಕಲಿತರೆ ಸಾಕಾ ಅಂಥದ್ದು ಎಲ್ಲ ಗೊತ್ತಿದ್ದರಷ್ಟೇ ಕಾರ್ಯಕ್ರಮ ಚೆನ್ನಾಗಿ ಆಗುವುದು...' ಎಂದು ಗೊಣಗುತ್ತಲೇ ಕಾರಿನ ಕೀ ತಿರುವಿದಳು.

'ಕುಣಿದಾಡೋ ಕೃಷ್ಣನ ಪಾತ್ರಧಾರಿ ನೃತ್ಯ ಚೆನ್ನಾಗಿ ಮಾಡಿದಳು ಅಲ್ವಾ?' ಎನ್ನುತ್ತಾ ನೀಲಿಮಾ ಪತಿ ಒಂದು ಸಾಲು ಸೇರಿಸಿದರು. 'ಹೌದು ಅದು ಬರೀ ಸುಲಭದ ತಾಳ ಕಣ್ರೀ ಭರತನಾಟ್ಯ ನಿಮ್ಗೇನ್ ಗೊತ್ತಾಗತ್ತೆ ಬಿಡಿ' ಎಂದು ಆ ಮಾತನ್ನೂ ಹಾರಿಸಿಬಿಟ್ಟಳು. ಪುಟ್ಟಿ ಮಾತ್ರ ಸುಮ್ಮನೇ ಮಾತು ಕೇಳಿಸಿಕೊಳ್ಳುತ್ತಾ ಕಾರಿನಲ್ಲಿ ಎಫ್.ಎಂ. ಚಾನೆಲ್ ಹುಡುಕುತ್ತಿದ್ದಳು.

***

ಮೊನ್ನೆ ಟೀವಿಯಲ್ಲಿ ಲೈವ್ ಸಂಗೀತ ಕಾರ್ಯಕ್ರಮ ಬರುತ್ತಿತ್ತು. ಶ್ವೇತಾ ಕೂಡ ನೋಡುತ್ತಿದ್ದಳು. ಪ್ರಸಿದ್ಧ ಆರ್ಕೆಸ್ಟ್ರಾ ಕಲಾವಿದ ಕಾರ್ತೀಕ್, ಶಾಸ್ತ್ರೀಯ ಮತ್ತು ಪಾಶ್ಚಾತ್ಯ ಸಂಗೀತದ 'ಸಮ್ಮಿಲನ' ಕಾರ್ಯಕ್ರಮ ನೀಡುತ್ತಿದ್ದ. ಹಂಸಧ್ವನಿಯಲ್ಲಿ 'ಮಹಾಗಣಪತಿಂ...' ಮೂಡಿಬರುತ್ತಿದ್ದರೆ, 'ಚಾನೆಲ್ ಚೇಂಜ್ ಮಾಡು, ಹಂಸಧ್ವನಿ ಹಾಡುವಾಗಲೇ ತಪ್ಪಿದ ಅವನು. ಇನ್ನೇನು ಹಾಡುತ್ತಾನೆ ಬಿಡು' ಎನ್ನುತ್ತಾ ಶ್ವೇತಾಳ ಪತಿ ರಿಮೋಟ್ ಕಿತ್ತುಕೊಂಡರು. ಶ್ವೇತಾಳ ಮಗನೋ, 'ಕಮ್ ಅಂಡ್ ಓವರ್ ಇನ್ ಮೈ ಡೈರೆಕ್ಷನ್ ಸೋ ಥ್ಯಾಂಕ್ ಫುಲ್ ಫಾರ್ ದಾಟ್ ಇಟ್ಸ್ ಸಚ್ ಅ ಬ್ಲೆಸಿಂಗ್ ಯೇ...' ಎನ್ನುತ್ತ ಡೆಸ್ಪಸಿಟೋ ಹಾಡನ್ನು ಬಾಯಿಪಾಠ ಗುನುಗುತ್ತಾ ಅಪ್ಪನ ಕೈಲಿದ್ದ ರಿಮೋಟ್ ಅನ್ನೇ ನೋಡತೊಡಗಿದ.

***

ಹೀಗೆ ಕಾರ್ಯಕ್ರಮಗಳಿಗೆ ಹೋಗಿ, ಮದುವೆ ಮನೆಗಳಿಗೆ ಹೋಗಿ ಮನೆಗೆ ವಾಪಸ್ಸಾದ ಮೇಲೆ ಅಪ್ಪ–ಅಮ್ಮ ಸೇರಿದಂತೆ ಮನೆಯಲ್ಲಿ ದೊಡ್ಡವರು ಟೀಕೆ ಟಿಪ್ಪಣಿಯಲ್ಲಿ ತೊಡಗುವುದು ಎಲ್ಲರ ಮನೆಯಲ್ಲಿಯೂ ನಡೆಯುವ ಪ್ರಕ್ರಿಯೆ. ಹಾಡು, ಸಂಗೀತ, ಸ್ಫೂರ್ತಿಯ ಉಪನ್ಯಾಸಗಳು ಅಥವಾ ಭಾಷಣಗಳನ್ನು ಮಕ್ಕಳು ಸ್ವಚ್ಛ ಮನಸ್ಸಿನಿಂದ ಕುತೂಹಲದ ಕಣ್ಣು ಕಿವಿಗಳೊಂದಿಗೆ ಆಲಿಸುತ್ತ, ಗಮನಿಸುತ್ತ ಇರುತ್ತಾರೆ. ದೊಡ್ಡವರಿಗೆ ತೋರಿದ ತಪ್ಪುಗಳು ಅವರಿಗೆ ಗೋಚರಿಸಲೂಬಹುದು, ಗೋಚರಿಸದೇ ಇರಲೂಬಹುದು. ಆದರೆ ಬೆಳೆಯುವ ಮಕ್ಕಳು ಅವುಗಳನ್ನೆಲ್ಲ ಸ್ವೀಕರಿಸುವ ವಿಧಾನ ವಿಭಿನ್ನವಾಗಿರುತ್ತದೆ.

ಕಾರ್ತೀಕ್‌ನ ಕಾರ್ಯಕ್ರಮಕ್ಕೆ ಸಾವಿರಾರು ಜನರು ಲೈವ್‌ನಲ್ಲಿ ಭಾಗವಹಿಸಿದ್ದಾರೆ ಎಂದರೆ ಅವನ ಸಾಧನೆ ಚಿಕ್ಕದಲ್ಲ. ಟೌನ್‌ಹಾಲ್‌ನಲ್ಲಿ ಏಕವ್ಯಕ್ತಿ ಪ್ರದರ್ಶನ ನೀಡುವ ಹಂತಕ್ಕೆ ಬರಬೇಕಾದರೆ, ಆ ಕಲಾವಿದೆ ಸಾಕಷ್ಟು ಸಾಧನೆ ಮಾಡಿರಬೇಕು ಅಲ್ಲವೇ. ಆದರೆ ಒಂದೇ ಟೀಕೆ, ಹಗುರ ಮಾತು, ಆ ಇಡೀ ಕಲಾಪ್ರಕಾರದ ಕುರಿತು, ಅಥವಾ ಒಬ್ಬ ವ್ಯಕ್ತಿಯ ದೀರ್ಘ ಸಾಧನೆಯ ಕುರಿತು ಮಕ್ಕಳ ಮನಸ್ಸು ಒಡೆದು ಹೋಗುವಂತೆ, ಉಡಾಫೆ ಧೋರಣೆ ತಳೆಯುವಂತೆ ಮಾಡಬಲ್ಲುದು. 'ಅದೇನು ಮಹಾ' ಎಂಬ ಅಹಂ ಅವರ ಮನದಲ್ಲಿ ಮೂಡುವಂತೆ ಮಾಡುವ ಅಪಾಯವಿದೆ.



ದೊಡ್ಡವರಿಗೆ ಇರುವಷ್ಟು ಜೀವನಾನುಭವ ಪುಟ್ಟ ಮಕ್ಕಳಿಗೆ ಇರುವುದಿಲ್ಲ. ಆದ್ದರಿಂದ ಅಷ್ಟೇನೂ ಚೆನ್ನಾಗಿಲ್ಲದ ನೃತ್ಯ, ಅವರಿಗೆ ಯಾವುದೋ ಕಾರಣಕ್ಕೆ ಬಹಳ ಇಷ್ಟವಾಗಿರಬಹುದು. ಆ ಇಷ್ಟದ ಚಿತ್ರವೇ ಕಲಸಿಹೋಗುವಂತಹ ಟೀಕೆಯನ್ನು ಪೋಷಕರು ಮಾಡಿದರೆ, ಅದರ ಪರಿಣಾಮ ಅವರ ಮಕ್ಕಳಿಗೇ ಆಗಿರುತ್ತದೆ. ವೇದಿಕೆಯಲ್ಲಿ ನೃತ್ಯ ಮಾಡಿದ ಕಲಾವಿದೆ, ಎಷ್ಟೋ ತಪ್ಪು ಹೆಜ್ಜೆಗಳನ್ನು ಇಟ್ಟುಕೊಂಡು, ಅದನ್ನು ತಿದ್ದಿಕೊಂಡು ವೇದಿಕೆಯನ್ನು ತಲುಪಿರುತ್ತಾಳೆ. ತಪ್ಪುಗಳನ್ನು ಮಾಡಿಕೊಂಡೇ ಸಾಧನೆಯ ಹಾದಿಯಲ್ಲಿ ಮುಂದುವರೆಯುತ್ತಾಳೆ. ನಮ್ಮ ಮಕ್ಕಳಿಗೆ ಅಂಥ ಏಳುಬೀಳಿನ ಪ್ರದರ್ಶನಗಳು ಪಾಠಗಳಾಗಿ, ಪ್ರೇರಣೆಯಾಗಿ, ಅವರು ತೊದಲು ಹೆಜ್ಜೆಗಳನ್ನು ಇಡಬೇಕಷ್ಟೇ. ಪೋಷಕರ ಮಾತುಗಳು ಅಂತಹ ಸಾಧನೆಯ ತೊದಲು ಹೆಜ್ಜೆಯಲ್ಲಿ ಮುಳ್ಳಾಗಿರಬಾರದು.

ತಪ್ಪುಗಳು ಮತ್ತು ಎಡವಟ್ಟುಗಳ ಬಗ್ಗೆ ಟೀಕೆ ಟಿಪ್ಪಣಿ ಮಾಡಲೇಬಾರದು ಎಂದೇನಿಲ್ಲ. 'ಅವನು ಹಂಸಧ್ವನಿಯಲ್ಲಿ ಸ್ವಲ್ಪ ತಪ್ಪಿದ. ಆದರೆ ಎದೆಗುಂದದೆ ಮುಂದಿನ ಹಾಡುಗಳನ್ನು ಬಹಳ ಆತ್ಮವಿಶ್ವಾಸದಿಂದ ಹಾಡಿದ!'. 'ಆಕೆ ನೃತ್ಯ ಚೆನ್ನಾಗಿ ಮಾಡಿದ್ಲು, ಪಾಪ ದಿರಿಸಿನ ಆಯ್ಕೆ ಯಾರು ಮಾಡಿದ್ದರೋ ಏನೋ ಸ್ವಲ್ಪ ಹೊಂದಾಣಿಕೆ ಆಗಲಿಲ್ಲ' – ಹೀಗೆ ತಮ್ಮ ಟೀಕೆಯ ಮಾತುಗಳನ್ನು ಸ್ವಲ್ಪ ಬದಲಿಸಿಕೊಳ್ಳುವುದರಿಂದ ಮಕ್ಕಳ ಮೇಲೆ ಸಕಾರಾತ್ಮಕ ಪರಿಣಾಮ ಆಗುತ್ತದೆ. ಅಪ್ಪ–ಅಮ್ಮ ಮಾತನಾಡಿಕೊಳ್ಳುವ ವಿಚಾರಗಳು ಮಕ್ಕಳ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರುತ್ತವೆ. ತೀರಾ ಕಪ್ಪುಬಿಳುಪಿನ ಟೀಕೆಗಳ ಬದಲು, ರಸಾಸ್ವಾದದ ಸಾಧ್ಯತೆಯನ್ನು ಮಕ್ಕಳಿಗೆ ಅಭ್ಯಾಸ ಮಾಡಿಸಬೇಕು. ತಪ್ಪುಗಳನ್ನು ಗುರುತಿಸಿದರೂ, ಆ ತಪ್ಪುಗಳನ್ನು ಮೀರಿದ ಸಾಧನೆಯನ್ನು ಗೌರವಿಸುವ ಮಾತುಗಳು ಅಗತ್ಯ. ಮಕ್ಕಳ ಮುಂದೆ ಮಾತ್ರವಲ್ಲ, ಮಾತು ಸುಂದರವಾಗಿದ್ದರೆ ಯಾವುದೇ ಕ್ಷೇತ್ರದಲ್ಲಾದರೂ ಸಂಬಂಧ ಆರೋಗ್ಯಕರವಾಗಿರುತ್ತದೆ.

ಪ್ರತಿಕ್ರಿಯಿಸಿ: feedback@sudha.co.in